

ಎಂ. ನಾಗರಾಜ ಶೆಟ್ಟಿ
ಕಲೆ: ಸಂತೋಷ್ ಸಸಿಹಿತ್ಲು

# ಮೂರನೆಯ ಕಣ್ಣು

**ಕಣ್ಣಿಲ್ಲದಿರುವುದಕ್ಕಿಂತ ಕೆಟ್ಟದ್ದು ಕಣ್ಣಿದ್ದೂ ದೂರದೃಷ್ಟಿ ಇಲ್ಲದಿರುವುದು**
**-ಹೆಲೆನ್ ಕೆಲ್ಲರ್**

ಅವಳು ಬ್ಯಾಂಕಿಗೆ ಬಂದಾಗ ಎಲ್ಲರೂ ಹುಬ್ಬೇರಿಸಿ ನೋಡಿದರು. ಸುಮಾರು ಐದೂವರೆ ಅಡಿಯ, ಮಾಸಲು ಬಿಳಿಯ, ತುಂಬು ಹರೆಯದ ಚೆಲುವೆ. ಎಲ್ಲರೂ ಕಣ್ಕಣ್ಣು ಬಿಟ್ಟು ನೋಡುತ್ತಿರುವಂತೆ ಒಳಬಂದ ಆಕೆ ವಿಚಾರಿಸಿದ್ದು ನನ್ನನ್ನು. ಆಕರ್ಷಕವಾದ ಉಡುಪು ಧರಿಸಿದ್ದ ಆಕೆ ಕೈಯಲ್ಲಿದ್ದ ಸ್ಟಿಕ್ಕನ್ನು ಮಡಚಿ, 'ನಾನು ಚೈತ್ರಾ' ಎಂದು ಕೈ ಚಾಚಿದಳು. ಮೂಗಿಗೆ ಅಡರಿದ ಪರ್ಫ್ಯೂಮಿನ ಸುವಾಸನೆಯನ್ನು ಆಸ್ವಾದಿಸುತ್ತಾ, ಸಂಕೋಚದಿಂದ ಕೈಕುಲುಕಿದೆ. ಮನಸ್ಸಲ್ಲೇ 'ಛೇ, ಇಷ್ಟು ಚಂದದ ತರುಣಿಗೆ ಕಣ್ಣು ಇರಬೇಕಿತ್ತು' ಅಂದುಕೊಂಡೆ. ಬ್ಯಾಗಿನಿಂದ ಜಾಯ್ನಿಂಗ್ ರಿಪೋರ್ಟ್ ತೆಗೆದು ನನ್ನ ಕೈಗೆ ಕೊಟ್ಟಳು. ಮ್ಯಾನೇಜರ್ ಚೇಂಬರಿಗೆ ಅವಳನ್ನು ಕರೆದುಕೊಂಡು ಹೋಗಿ ಪರಿಚಯಿಸಿದೆ.

* * *

ಕೆಲವು ದಿನಗಳ ಹಿಂದೆ 'ಸ್ಟಾಫ್ ಶಾರ್ಟ್ ಇದೆ ಎನ್ನುತ್ತಿದ್ದೀರಲ್ಲ... ಒಬ್ಬರು ಇದಾರೆ. ನಿಮ್ಮ ಬ್ರಾಂಚಿಗೆ ಪೋಸ್ಟ್ ಮಾಡ್ಲಾ...? ಆದ್ರೆ ಸ್ಪೆಷಲ್ ಕೇಸ್' ಜನರಲ್ ಮ್ಯಾನೇಜರ್ ಫೋನ್ ಮಾಡಿ ಕೇಳಿದ್ದರು. ಯೂನಿಯನ್ ಕಾರ್ಯದರ್ಶಿಯಾಗಿ ನನಗೆ ಅವರ ಜೊತೆ ಸಂಪರ್ಕವಿತ್ತು. ನಾವು ನೌಕರರ ಬೇಡಿಕೆಗಳು, ಸಿಬ್ಬಂದಿ- ಮ್ಯಾನೇಜ್‌ಮೆಂಟ್ ಜೊತೆಗಿನ ತಕರಾರುಗಳು ಮತ್ತು ಟ್ರಾನ್ಸ್‌ಫರ್ ವಿಚಾರದಲ್ಲಿ ಆಗಾಗ್ಗೆ ಚರ್ಚಿಸುವುದಿತ್ತು. ಅಗತ್ಯವಿದ್ದಾಗ ನೇರವಾಗಿಯೇ ಸಂಧಿಸುತ್ತಿದ್ದೆ.

ನಮ್ಮ ಬ್ರಾಂಚಿನಲ್ಲಿ ಅಗತ್ಯವಿರುವಷ್ಟು ಸಿಬ್ಬಂದಿ ಇರಲಿಲ್ಲ. ಇರುವ ಕೆಲವರೇ ರಜೆಯನ್ನೂ ಹಾಕದೆ ಕೆಲಸ ಮಾಡುವ ಪರಿಸ್ಥಿತಿ ಇತ್ತು. ಜಿ.ಎಂ ಕನ್ನಡಿಗರೇ ಆದ್ದರಿಂದ ಅವರೊಡನೆ ನನಗಿರುವ ಸಂಪರ್ಕವನ್ನು ಬಳಸಿಕೊಂಡು ಯಾರನ್ನಾದರೂ ಹಾಕಿಸಿ ಎಂದು ಬ್ರಾಂಚ್ ಮ್ಯಾನೇಜರ್ ಸಹಿತ ಎಲ್ಲರೂ ನನ್ನನ್ನು ಒತ್ತಾಯಿಸುತ್ತಿದ್ದರು. ಸಿಬ್ಬಂದಿಯ ಕೊರತೆ ಇರುವುದು ನಮ್ಮಲ್ಲಿ ಮಾತ್ರವಲ್ಲ ಎಂದು ಗೊತ್ತಿದ್ದರೂ 'ಮನೆ ಗೆದ್ದು ಮಾರು ಗೆಲ್ಲು' ಎನ್ನುವಂತೆ ಜಿ.ಎಂ ಅನ್ನು ಭೇಟಿಯಾಗಿ ಒಬ್ಬರನ್ನಾದರೂ ಪೋಸ್ಟ್ ಮಾಡಿ ಎಂದು ವಿನಂತಿಸಿದ್ದೆ. ಅವರು, 'ನಂದು ಏನೂ ನಡಿಯಲ್ಲ ಮಾರಾಯ್ರೇ. ನಿಮಗೆ ಗೊತ್ತುಂಟಲ್ಲ, ಮೇಲಿನವರೆಲ್ಲ ನಾರ್ತ್‌ನವರೇ. ಅವರು ಹೇಳಿದ್ದೇ ಆಗಬೇಕು' ಎಂದರೂ ನಾನು ಪಟ್ಟು ಬಿಡದೆ, 'ನಿಮಗೆ ಜಾಸ್ತಿ ಸರ್ವೀಸ್ ಇಲ್ಲ, ನೀವು ಇರುವಾಗಲೇ ಏನಾದರೂ ಮಾಡಿ' ಎಂದು ಒತ್ತಾಯಿಸಿದ್ದೆ.

ಜಿ.ಎಂ ಫೋನಲ್ಲಿ ಸ್ಪೆಷಲ್ ಕೇಸ್ ಎಂದು ಹೇಳಿದ್ದು ನನ್ನನ್ನು ಯೋಚಿಸುವಂತೆ ಮಾಡಿತು. ಕಿರುಕುಳ ಕೊಡುವವರನ್ನು, ಸರಿಯಾಗಿ ಕೆಲಸ ಮಾಡದವರನ್ನು ಎತ್ತಿ ಎಲ್ಲಾದರೊಂದು ಕಡೆ ಹಾಕುವುದಿದೆ. ಅಂಥವರಿಂದ ಪ್ರಯೋಜನವೇನೂ ಇಲ್ಲ; 'ಆಟಕ್ಕುಂಟು, ಲೆಕ್ಕಕ್ಕಿಲ್ಲ' ಎನ್ನುವಂತಾಗುತ್ತದೆ.